ಸ್ಥಳಾಂತರಿಸಿ ಆದೇಶ ಹೊರಡಿಸಿರುವುದಿಲ್ಲ.

ಆ. ಹಿರೇವಡ್ಡಟ್ಟಿ ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಿ ತಿರಸ್ಕರಿಸಲಾಗಿದೆ.

ಬಿಜಾಪುರ ತಾಲ್ಲೂಕಿನ ಗ್ರಾಮ ಸಡಕ್ ಯೋಜನೆ.

೧೪೩೧(೧೬೫೦)

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ(ತಿಕೋಟ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

೧. ಪ್ರಧಾನ ಮಂತ್ರಿಗಳ ಗ್ರಾಮ ಸಡಕ್ ಯೋಜನೆ ಬಿಜಾಪುರ ತಾಲ್ಲೂಕಿಗೆ ಮಂಜೂರಾಗಿದೆಯೆ?

೨. ಮಂಜೂರಾಗಿದ್ದರೆ, ಯಾವ ಕಾಮಗಾರಿಗಳನ್ನು ಈ ಯೋಜನೆಯಡಿಯಲ್ಲಿ ಅಳವಡಿಸಲಾಗಿದೆ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

೧. ಹೌದು.

೨. ಕಾಮಗಾರಿಗಳ ವಿವರಗಳು ಈ ಕೆಳಗಿನಂತಿದೆ.

ಕ್ರ.ಸಂ.	ರಸ್ತೆಗಳ ಹೆಸರು	ರಸ್ತೆಯ ಉದ್ದ ಕಿ.ಮೀ.ಗಳಲ್ಲಿ	ಒಟ್ಟು ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)
೧.	ತೊಣಶ್ಯಾಳ ಅಪ್ರೋಚ್ ರಸ್ತೆ	೫.೦೦	೨೫.೦೦
೨.	ಹಡಗಲಿ-ಹಡಗಲಿ ತಾಂಡಾ ೧-೨	೪.೫೦	೨೫.೦೦
	ಒಟ್ಟು	೯.೫೦	೫೦.೦೦